ಓಎಸ್ 120/2022

ಡಿಡಬ್ಲ್ಯೂ.1

**ಸಾಕ್ಷಿಯು ದಿಃ 11.09.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಎಂ.ಎನ್.ಎಸ್. ವಕೀಲರಿಂದ**

ದಾವ ಆಸ್ತಿಯು ವಾದಿಗೆ 1972-73 ರಂದು ಸರ್ಕಾರದಿಂದ ಮಂಜೂರು ಆಗಿದೆ ಎಂದರೆ ಸಾಕ್ಷಿಯು ಬ್ಲಾಕ್ ನಂ.3 ರಲ್ಲಿ ಅವರಿಗೆ ಆಸ್ತಿ ಮಂಜೂರು ಆಗಿದೆ 43 ರಲ್ಲಿ ಮಂಜೂರು ಆಗಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ನೀಡಿರುವ ಸಾಗುವಳಿ ಚೀಟಿಯಲ್ಲಿ ಬ್ಲಾಕ್ ನಂ.3 ಎಂದು ನಮೂದು ಇದೆ ಎಂದರೆ ಸರಿ. ಸದರಿ ಸಾಗುವಳಿ ಚೀಟಿಯ ಆಧಾರದ ಮೇಲೆ ವಾದಿಯ ಸರ್ವೇ ನಂಬರ್ 211/ಪಿ43 ಆಗಿದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 211/ಪಿ ಯನ್ನು ರದ್ದುಪಡಿಸಿ ಈಗ ಸರ್ವೇ ನಂಬರ್ 211 ಎಂದು ಮಾಡಲಾಗಿರತ್ತದೆ ಎಂದರೆ ಸರಿ. ವಾದಿಯು ಸಾಗುವಳಿ ಚೀಟಿ ನೀಡುವ ಮುಂಚಿನಿಂದಲೂ ಆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರಿಂದ ಅವರಿಗೆ ಸಾಗುವಳಿ ಚೀಟಿಯ ಮೂಲಕ ಆಸ್ತಿ ಮಂಜೂರು ಆಗಿದೆ ಎಂದರೆ ಸಾಕ್ಷಿಯು ಅವರು ಸಾಗುವಳಿ ಮಾಡುತ್ತಿದ್ದ ಆಸ್ತಿ ಬೇರೆ ಮತ್ತು ದಾವ ಆಸ್ತಿ ಬೇರೆ ಎಂದು ನುಡಿಯುತ್ತಾರೆ. ವಾದಿಯು ದಾವ ಆಸ್ತಿಯನ್ನೇ ಉಳುಮೆ ಮಾಡುತ್ತಿದ್ದರು ಮತ್ತು ದಾವ ಆಸ್ತಿಯನ್ನೆ ವಾದಿಗೆ ಮಂಜೂರು ಮಾಡಲಾಗಿದೆ ಎಂದರೆ ಸರಿಯಲ್ಲ. ದಾವ ಆಸ್ತಿಗೆ ಸಂಬಂಧಿಸಿದಂತೆ ವಾದಿಗೆ ಪಹಣಿ, ಸಾಗುವಳಿ ಚೀಟಿ, ಕೈಬರವಣಿಗೆ ಪಹಣಿ, ಎಂಆರ್ ಇದೆ ಎಂದರೆ ಸಾಕ್ಷಿಯು ವಾದಿಗೆ ಸಂಬಂಧಿಸಿದ್ದು ಪ್ಲಾಟ್ ನಂ.3 ಮತ್ತು ಪ್ಲಾಟ್ ನಂ. 43 ವಾದಿಗೆ ಸಂಬಂಧಿಸಿದ್ದಲ್ಲ ಎಂದು ನುಡಿಯುತ್ತಾರೆ.

2. ದಾವ ಆಸ್ತಿಯ ದಕ್ಷಿಣಕ್ಕೆ ವಾದಿಯ ತಂದೆ ವೆಂಕಟಯ್ಯ ರವರ ಜಮೀನು ಇದೆ ಎಂದರೆ ಸಾಕ್ಷಿಯು ಇಲ್ಲ ಗೋವಿಂದರಾಜು, ಶ್ರೀನಿವಾಸ ಮತ್ತು ವೆಂಕಟೇಶ ರವರ ಜಮೀನು ಇದೆ ಎಂದು ನುಡಿಯುತ್ತಾರೆ. ದಾವ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿರುವ ಆಸ್ತಿ ವೆಂಕಟಯ್ಯ ರವರಿಗೆ ಸೇರಿದ್ದು ಸದರಿ ಆಸ್ತಿಯನ್ನು ಅವರ ಸಹೋದರರಾದ ಗೋವಿಂದರಾಜು, ಶ್ರೀನಿವಾಸ ಮತ್ತು

ವೆಂಕಟೇಶ ರವರು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಗೋವಿಂದರಾಜು, ಶ್ರೀನಿವಾಸ ಮತ್ತು ವೆಂಕಟೇಶ ರವರು ಉಳುಮೆ ಮಾಡುತ್ತಿರುವ ಸ್ವತ್ತಿನ ದಕ್ಷಿಣಕ್ಕೆ ನನಗೆ ಸೇರಿದ ಆಸ್ತಿ ಇರುತ್ತದೆ ಎಂದರೆ ಸರಿ. ನನಗೆ ಸೇರಿದ ಆಸ್ತಿ ನನ್ನ ತಂದೆ ವೆಂಕಟಯ್ಯ ರವರಿಗೆ ಮಂಜೂರು ಆಗಿತ್ತು ಎಂದರೆ ಸರಿ. ವಾದಿ ವೆಂಕಟೇಶ್ ರವರ ತಂದೆ ವೆಂಕಟಯ್ಯ, ನನ್ನ ತಂದೆ ವೆಂಕಟಯ್ಯ ಮತ್ತು ವಾದಿ ವೆಂಕಟೇಶ್ ರವರಿಗೆ ತಲಾ 4 ಎಕರೆ ಜಮೀನು ಮಂಜೂರು ಆಗಿತ್ತು ಎಂದರೆ ಸರಿ. ಈಗ ನಾನು ವ್ಯವಸಾಯ ಮಾಡುತ್ತಿರುವ ಜಮೀನಿನ ಸರ್ವೇ ನಂಬರ್ ಸಹ 211 ಆಗಿರುತ್ತದೆ ಎಂದರೆ ಸರಿ. ದಾವ ಆಸ್ತಿಯಲ್ಲಿ ವ್ಯವಸಾಯ ಮಾಡುವಾಗ ನಾನು ವಾದಿಗೆ ತೊಂದರೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ತದ ನಂತರ ವಾದಿಯು ನನ್ನ ವಿರುದ್ಧ ಗುಂಡ್ಲುಪೇಟೆ ಪೊಲೀಸ್ ಠಾಣೆ ಗೆ ದೂರು ಕೊಟ್ಟಿದ್ದರು ಎಂದರೆ ಸರಿ. ಪೊಲೀಸ್ ಠಾಣೆಯಲ್ಲಿ ಪರಸ್ಪರ ತಂಟೆ ತಕರಾರಿಗೆ ಹೋಗದಂತೆ ಮುಚ್ಚಳಿಕೆ ಬರೆದುಕೊಟ್ಟಿದ್ದರು ಎಂದರೆ ಸರಿ. ನಂತರ ಪರಸ್ಪರ ಗಲಾಟೆಯಾಗಿ ನಮ್ಮ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸಾಕ್ಷಿಯು ಗಲಾಟೆ ಯಾಗಿಲ್ಲ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದು ನುಡಿಯುತ್ತಾರೆ. ಸದರಿ ಕ್ರಿಮಿನಲ್ ಪ್ರಕರಣ ದಾವ ಆಸ್ತಿಗೆ ಸಂಬಂಧಿಸಿದ ವಿಚಾರವಾಗಿ ಆಗಿದೆ ಎಂದರೆ ಸರಿ.

3 ದಾವ ಆಸ್ತಿಯ ಮೇಲೆ ವಾದಿಯು ಭರಗಿ ಸಿಂಡಿಕೇಟ್ ಬ್ಯಾಂಕ್ ದಿಂದ ಸಾಲ ಪಡೆದಿದ್ದಾರೆ ಎಂದರೆ ಸಾಕ್ಷಿಯು ನಾವು ಅರ್ಜಿ ಸಲ್ಲಿಸಿ ತಡೆದಿದ್ದೇವೆ ಎಂದು ನುಡಿಯುತ್ತಾರೆ. ಒಂದು ಬಾರಿ ವಾದಿಯು ದಾವ ಆಸ್ತಿಯ ಮೇಲೆ ಬ್ಯಾಂಕ್ ನಿಂದ ಸಾಲ ಪಡೆದಿದ್ದು 2ನೇ ಬಾರಿ ಸಾಲ ಪಡೆಯುವಾಗ ನಾವು ಅದು ಒಟ್ಟು ಕುಟುಂಬದ ಆಸ್ತಿ ಎಂದು ತಕರಾರು ಸಲ್ಲಿಸಿರುತ್ತೇವೆ ಎಂದರೆ ಸರಿ. ದಾವ ಆಸ್ತಿಯಲ್ಲಿ ಸರ್ಕಾರದಿಂದ ಕೊಳವೆ ಬಾಯಿ ಹಾಕಿಸಲಾಗಿದೆ ಎಂದರೆ ಸಾಕ್ಷಿಯು ಇಲ್ಲ ಬೇರೆಯವರ ಜಮೀನಿನಲ್ಲಿ ಹಾಕಿಸಲಾಗಿದೆ ಎಂದು ನುಡಿಯುತ್ತಾರೆ. ದಾವ ಆಸ್ತಿಯಲ್ಲಿ ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ತಂದ ಗೀಡಗಳನ್ನು ವಾದಿಯು ನೆಟ್ಟಿಕೊಂಡಿದ್ದಾರೆ ಎಂದರೆ ಸರಿ. ದಾವ ಆಸ್ತಿಯಲ್ಲಿ ಇದ್ದ ಕೊಳವೆ ಬಾಯಿಯನ್ನು ರಿಪೇರಿ ಮಾಡಿಸಲು ಹೊದಾಗ ವಾದಿಯನ್ನು ತಡೆದಿರುತ್ತೇವೆ ಎಂದರೆ ಸರಿ.

ಓಎಸ್ 120/2022

ಡಿಡಬ್ಲ್ಯೂ.1

4. ಸರ್ವೇ ನಂಬರ್ 211/ಪಿ–17 ರಲ್ಲಿ ನನಗೆ 4 ಎಕರೆ ಜಮೀನ ನನ್ನ ತಂದೆಯ ವೆಂಕಟಯ್ಯ ರವರ ಹೆಸರಿಗೆ ಮಂಜೂರಾಗಿರುತ್ತದೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಆಲತ್ತೂರು ಗ್ರಾಮದವರ ಮೇಲೆ ಒತ್ತುವರಿ ಮಾಡುತ್ತಿದ್ದಾರೆ ಎಂದು ದಾವೆ ಸಲ್ಲಿಸಿದ್ದು ಸದರಿ ದಾವೆ ನಮ್ಮ ಪರವಾಗಿ ತೀರ್ಪಾಗಿರುತ್ತದೆ. ಸರ್ವೇ ನಂಬರ್ 211/ಪಿ3 ಮತ್ತು ಸರ್ವೇ ನಂಬರ್ 211/ಪಿ43 ಎರಡು ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಗುವಳಿ ಚೀಟಿ ನೀಡುವಾಗ ಪಿ–3 ಎಂದು ನಮೂದಿಸಿದ್ದು ನಂತರ ಗಣಕೀಕೃತ ಆರ್.ಟಿ.ಸಿ ನೀಡುವಾಗ ಪಿ–43 ಎಂದು ಪಹಣಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಜಮೀನನ್ನು ಆಲತ್ತೂರು ಗ್ರಾಮದವರು ಉಳುಮೆ ಮಾಡುತ್ತಿರುವುದರಿಂದ ನಾನು ದಾವ ಆಸ್ತಿ ನನಗ ಸೇರಬೇಕೆಂದು ವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ